# ಸಾಂಸ್ಕೃತಿಕ ಹಿನ್ನಲೆಯಲ್ಲಿ ದೇವಿ ಶಿಲ್ಪಗಳ ಪರಿಕಲ್ಪನೆ

**ಸತೀಶ ಪಿ.[1] & ಶಲ್ವಪಿಳ್ಳೈ ಅಯ್ಯಂಗಾರ್[2]**

[1]ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು.

[2]ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು.

**Received: 06/01/2025 ; Accepted: 15/02/2025 ; Published: 03/03/2025**

**DOI: https://doi.org/10.5281/zenodo.14961403**

## ABSTRACT:

ಮಂಡ್ಯ ಜಿಲ್ಲೆಯ ಎಂಬುದು ಕರ್ನಾಟಕ ರಾಜ್ಯದಲ್ಲಿ ಕಂಡುಬರುವ ಒಂದು ಪ್ರಸಿದ್ಧ ಜಿಲ್ಲೆ ಹಾಗೂ ಪ್ರವಾಸಿ ತಾಣ ಕೇಂದ್ರವಾಗಿದ್ದು, ಇದು ಮೈಸೂರಿನಿಂದ ಸುಮಾರು 35 ಕಿಲೋ ಮೀಟರ್ ದೂರದಲ್ಲಿ ಕಂಡುಬರುತ್ತದೆ. ಈ ಜಿಲ್ಲೆಯನ್ನು ಪ್ರಮುಖವಾಗಿ 7 ತಾಲೂಕುಗಳನ್ನು 11 ಪಟ್ಟಣ 31 ಹೋಬಳಿ 232 ಮಂಡಲ ಪಂಚಾಯಿತಿ ಹಾಗೂ 1370 ಗ್ರಾಮಗಳನ್ನು ಒಳಗೊಂಡಿದೆ. ಈ ಜಿಲ್ಲೆಯು 01–07–1939ರಲ್ಲಿ ಮೈಸೂರು ಪ್ರಾಂತ್ಯದಿಂದ ಬೇರ್ಪಟ್ಟು ಒಂದು ಸ್ವತಂತ್ರ ಜಿಲ್ಲೆಯಾಗಿ ರಚನೆಗೊಂಡಿತು. ಸಮುದ್ರ ಮಟ್ಟದಿಂದ ಸುಮಾರು 760 ರಿಂದ 920 ಮೀಟರ್ ಅಂತರದಲ್ಲಿ ಕೇಂದ್ರೀಕೃತಗೊಂಡಿದೆ.

ದ್ವಾಪರಯುಗದಲ್ಲಿ ಮಂಡಮೇಮು ಎಂಬ ಋಷಿಯು ಇಲ್ಲಿ ವಾಸಿಸುತ್ತಿದ್ದ ಹಿನ್ನೆಲೆ ಮತ್ತು ಮಾಂಡವ್ಯ ಎಂಬ ಋಷಿಯು ಇಲ್ಲಿನ ಅರಣ್ಯ ಪ್ರದೇಶದಲ್ಲಿ ವಾಸವಾಗಿದ್ದು ಇಲ್ಲಿ ಅರಣ್ಯ ಪ್ರಾಣಿಗಳಿಗೆ ವೇದವನ್ನು ಉಪದೇಶಿಸಿದ ಕಾರಣ ಇದಕ್ಕೆ ವೇದಾರಣ್ಯ ಅಥವಾ ವೇದಾಪುರ ಎಂತಲೂ, ಮತ್ತೊಂದು ಐತಿಹ್ಯದ ಪ್ರಕಾರ ಸಕಲೇಶ್ವರ ಸ್ವಾಮಿಯ ಈ ಪ್ರದೇಶದಲ್ಲಿ ವಿಷ್ಣು ದೇವಾಲಯವನ್ನು ನಿರ್ಮಿಸಿದ ಕಾರಣ ಸ್ಥಳಕ್ಕೆ ವಿಷ್ಣುಪುರ ಎಂತಲೂ ಸಹ ಕರೆಯಲಾಗಿದೆ. ಇಲ್ಲಿ 20ನೇ ಶತಮಾನದವರೆಗೂ ಒಣ ಭೂಮಿಯಾಗಿದ್ದು ಕೆ.ಆರ್.ಎಸ್. ಅಣೆಕಟ್ಟೆಯ ನಿರ್ಮಾಣದಿಂದಾಗಿ ಈ ಜಿಲ್ಲೆಗೆ ಸುಮಾರು ಒಂದುವರೆ ಲಕ್ಷ ಎಕ್ಟೇರ್ ಭೂಮಿಯು ನೀರಾವರಿ ಸೌಲಭ್ಯವನ್ನು ಪಡೆದು ಆರ್ಥಿಕ ಪ್ರಗತಿಯತ್ತ ಸಾಗಿದೆ. ಇಲ್ಲಿ ಪ್ರಮುಖವಾಗಿ ಕಬ್ಬು ಮತ್ತು ಭತ್ತವನ್ನು ಹೆಚ್ಚಾಗಿ ಬೆಳೆಯುವುದರಿಂದ ಈ ಜಿಲ್ಲೆಗೆ 'ಸಕ್ಕರೆ ನಗರ' ಹಾಗೂ 'ಭತ್ತದ ಕಣಜ' ಎಂದು ಕರೆಯಲಾಗಿದೆ.

ಇಲ್ಲಿ ಪ್ರಧಾನವಾಗಿ 1902ರಲ್ಲಿ ಶಿವನಸಮುದ್ರದಲ್ಲಿ ಆರಂಭವಾದ ಜಲವಿದ್ಯುತ್ ಯೋಜನೆ ಏಷ್ಯಾದಲ್ಲಿ ಅತಿ ದೊಡ್ಡ ವಿದ್ಯುತ್ ಶಕ್ತಿ ಕೇಂದ್ರ ಎಂಬ

ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಒಟ್ಟು ವಿಸ್ತೀರ್ಣ 4961 ಚದರ ಕಿಲೋಮೀಟರ್ ಇದ್ದು $76^0$–19 ಪೂರ್ವ ರೇಖಾಂಶದಿಂದ $77^0$–07 ಪಶ್ಚಿಮ ರೇಖಾಂಶದವರೆಗೂ ಹಾಗೂ $12^0$–11 ರಿಂದ $13^0$–00 ಉತ್ತರ ಅಕ್ಷಾಂಶಗಳ ನಡುವೆ ವಿಸ್ತರಿಸಿದೆ. ಇಲ್ಲಿ ಪ್ರಮುಖವಾಗಿ ನಾಲ್ಕು ತಾಲೂಕುಗಳು ಮಾತ್ರ ರೈಲ್ವೆ ಮಾರ್ಗದಿಂದ ಸಂಪರ್ಕಿಸಲ್ಪಟ್ಟಿವೆ. (ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಪಾಂಡವಪುರ) ಇಲ್ಲಿ ವಿಶ್ವೇಶ್ವರಯ್ಯ ನಾಲೆ ಹಾಗೂ ಹೇಮಾವತಿ ಜಲಾಶಯದಿಂದ ಸದಾ ನೀರಿನ ಸೌಲಭ್ಯದಿಂದಾಗಿ ಹಚ್ಚಹಸಿರಿನಿಂದ ಕಂಗೊಳಿಸುತ್ತದೆ. ಇಂದಿಗೂ ಈ ಜಿಲ್ಲೆಯು ಲೋಕಸಭಾ ಚುನಾವಣೆಯಲ್ಲಿ ಇಡೀ ಭಾರತವೇ ಆಕರ್ಷಿಸುವಂತಹ ಫಲಿತಾಂಶವನ್ನು ನೀಡುತ್ತಲೇ ಬಂದಿದೆ.

**KEYWORDS:**

ಮಂಡಮೇಮು, ಅರ್ಜುನಪುರಿ, ಡಿಂಬಾಕಾಸುರ, ಪ್ರಭಾವಳಿ, ಹರಕೆ, ಪ್ರತಿಮಾಶಾಸ್ತ್ರ.

## 1. ಶ್ರೀ ಆದಿಶಕ್ತಿ ಡಿಂಕದಮ್ಮ ದೇವಿ

**ಸ್ಥಳ:** ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಚಿನಕುರಳಿ ಹೋಬಳಿಯ ಡಿಂಕಾ ಎಂಬ ಗ್ರಾಮದಲ್ಲಿ ಈ ದೇವಿಯು ನೆಲೆಗೊಂಡಿದ್ದಾಳೆ. ಈ ದೇವಿಯು ಪ್ರಾರಂಭದಲ್ಲಿ ಮಾರಮ್ಮನಾಗಿ ನೆಲೆಗೊಂಡು ನಂತರ ಈ ಗ್ರಾಮವನ್ನು ಕಾಯುವ ಗ್ರಾಮ ದೇವತೆಯಾಗಿ ಶ್ರೀ ಆದಿಶಕ್ತಿ ಡಿಂಕದಮ್ಮನಾಗಿ ಪ್ರಸಿದ್ಧಿ ಪಡೆದುಕೊಂಡಿದ್ದಾಳೆ.

**ಹಿನ್ನೆಲೆ:** ಈ ದೇವಿಯು ಶ್ರೀಮಹಾವಿಷ್ಣುವಿನ ಪತ್ನಿಯಾದ ಮಹಾಲಕ್ಷ್ಮಿಯ ಅವತಾರ ಎಂದು ಇಲ್ಲಿನ ಪೌರಾಣಿಕ ಮಾಹಿತಿಯಿಂದ ತಿಳಿದು ಬರುತ್ತದೆ. ಈ ಹಿಂದೆ ಈ ಪ್ರದೇಶದಲ್ಲಿ 'ಡಿಂಬಾಕಾಸುರ' ಎಂಬ ರಾಕ್ಷಸನು ಈಗಿನ ಬೇಬಿ ಬೆಟ್ಟದಲ್ಲಿ ವಾಸವಾಗಿದ್ದುಕೊಂಡು ಅಕ್ಕಪಕ್ಕದ ಜನರಿಗೆ ತುಂಬಾ ಹಿಂಸೆಯನ್ನು ಕೊಡುತ್ತಿದ್ದನು. ಈತ ಜನರನ್ನು ವಂಚಿಸಲು ಸುಂದರವಾದ ಮಗುವಿನ ರೂಪ ತಾಳಿ ಬೆಟ್ಟದಲ್ಲಿ ಸುಡಿದಾಡುತ್ತಿದ್ದ, ಇದನ್ನು ವೀಕ್ಷಿಸಲು ಬರುವ ಯಾವುದೇ ಜನರನ್ನು ಮಗುವಿನಿಂದ ದೊಡ್ಡ ರಾಕ್ಷಸನ ಆಕಾರವನ್ನು ಪಡೆದು ಎಲ್ಲರನ್ನೂ ನುಂಗುತ್ತಿದ್ದನು. ಇದರಿಂದ ಬೇಸತ್ತ ಜನರು ಈ ಪ್ರದೇಶವನ್ನು ಬಿಟ್ಟು ಕೊಡುಗು ಪ್ರಾಂತ್ಯಕ್ಕೆ ವಲಸೆ ಹೋದರು ಹಾಗೂ ಇವರ ಕಣ್ಣಿಗೆ ಕಾಣದೆ ಅರಣ್ಯಗಳಲ್ಲಿ ತಲೆಮರೆಸಿಕೊಂಡು ವಾಸಿಸಲು ನಿಶ್ಚಯಿಸಿದರು. ಈ ಮಾಯಾವಿ ರಾಕ್ಷಸನಿಂದ ಆಗಾಗ್ಗೆ ದೇವಾನುದೇವತೆಗಳಿಗೂ ಕಷ್ಟ ತಪ್ಪುತ್ತಿರಲಿಲ್ಲ. ಇದಕ್ಕಾಗಿಯೇ ದೇವತೆಗಳೆಲ್ಲರೂ ಸೇರಿ ಶ್ರೀಮಹಾವಿಷ್ಣುವಿನ ಮೊರೆ ಇಡಲಾಗಿ ಕರುಣಾಜನಕನಾದ ಶ್ರೀಮಹಾವಿಷ್ಣು ಈ 'ಡಿಂಬಾಕಾಸುರ'ನ ಅಂತ್ಯ ಮಾಡಲು ಮಹಾಲಕ್ಷ್ಮಿಯನ್ನು ನೇಮಿಸುತ್ತಾರೆ.

ಆ ಪ್ರಕಾರ ಮಹಾಲಕ್ಷ್ಮಿಯು ಶ್ರೀ ಆದಿಶಕ್ತಿಯ ರೂಪ ತಾಳಿ ಈ ರಾಕ್ಷಸನ

ಸಂಹಾರಕ್ಕಾಗಿ ತ್ವರೆಯಿಂದ ಈ ಸ್ಥಳಕ್ಕೆ ಬರುತ್ತಾರೆ. ಇವರಿಬ್ಬರ ಈ ಘೋರ ಕದನವನ್ನು ವೀಕ್ಷಿಸಲು ಆಕಾಶದಲ್ಲಿ ದೇವಾನುದೇವತೆಗಳು ಸೇರಿಕೊಂಡರು. 'ಡಿಂಬಾಕಾಸುರ'ನು ಮತ್ತೆ ತನ್ನ ಮಾಯಾವಿ ರೂಪವನ್ನು ತಾಳಿ ಚಿಕ್ಕ ಮಗುವಿನ ಆಕಾರದಲ್ಲಿ ಬೆಟ್ಟದಿಂದ ಹೊರಬಂದನು. ದೇವಿಯು ಈ ಮಾಯಾರೂಪವನ್ನು ಅರಿತು ತಕ್ಷಣವೇ ಮಗುವಿನ ರೂಪದ ಈ ರಾಕ್ಷಸನನ್ನು ತನ್ನ ಹೆಗಲ ಮೇಲೆ ಇಟ್ಟುಕೊಂಡುರು.

ಇದರ ಪರಿಣಾಮ ಈ ರಾಕ್ಷಸನು ಅದ್ಭುತವಾಗಿ ಬೆಳೆಯುತ್ತಾನೆ. ಇದನ್ನು ಗ್ರಹಿಸಿದ ದೇವಿಯು ತಕ್ಷಣವೇ ಅವನಿಗೆ ಒಂದು ಘೋರ ಪೆಟ್ಟು ಕೊಡುತ್ತಾಳೆ. ಇದರ ಪ್ರಭಾವ 'ಡಿಂಬಾಕಾಸುರ'ನು ಅಲ್ಲಿಂದಲೇ ಮಾಯವಾಗಿ ಅರಣ್ಯ ಪ್ರದೇಶಕ್ಕೆ ಓಡಿ ಹೋಗುತ್ತಾನೆ. ದೇವಿಯು ಅವನನ್ನು ಬಿಡದೆ ಹಿಂಬಾಲಿಸಿ ತುಸು ದೂರದಲ್ಲಿ ಸಂಧಿಸಿ ಯುದ್ಧಕ್ಕೆ ನಿಲ್ಲುತ್ತಾಳೆ. ಇವರಿಬ್ಬರಿಗೂ ಉಗ್ರ ಕದನ ನಡೆಯುತ್ತದೆ. ಆದರೆ ರಾಕ್ಷಸನ ಬಾಣಗಳಿಂದ ತಾಯಿಗೆ ತುಂಬಾ ಗಾಯವಾಯಿತು. ಇದರಿಂದ ಕೋಪಗೊಂಡ ದೇವಿಯು ತನ್ನ ಆದಿಶಕ್ತಿ ಆಯುಧಗಳಿಂದ ರಾಕ್ಷಸನನ್ನು ಭೂಮಿಗೆ ಕೆಡವಿ ಕಾಲಿನಿಂದ ಪಚಪಚನೆ ತುಳಿದುಬಿಡುತ್ತಾಳೆ. ಆಗಿನಿಂದ 'ಡಿಂಬಾಕಾಸುರ ಮರ್ದಿನಿ' ಎಂಬ ನಾಮಾಂಕಿತದಿಂದ ಇಲ್ಲಿಯೇ ನೆಲೆಸಿ ಭಕ್ತರನ್ನು ಅನುಗ್ರಹಿಸುತ್ತಾಳೆ. 'ಡಿಂಬಾಕಾಸುರ'ನ ಸಂಹಾರವಾದ ಈ ಸ್ಥಳಕ್ಕೆ 'ಡಿಂಕಾ = ಡಿಂಬಕಾ' ಎಂಬ ಹೆಸರು ಪ್ರಾಪ್ತಿಯಾಯಿತು.

**ಪ್ರತಿಮಾಶಾಸ್ತ್ರ:** ಈ ದೇವಿಯನ್ನು ಸಂಪೂರ್ಣವಾಗಿ ಶುದ್ಧ ಹೊನ್ನೆಯ ಮರದಿಂದ ಸುಮಾರು ಮೂರುವರೆ ಅಡಿ ಎತ್ತರ ಕೆತ್ತನೆ ಮಾಡಿ ಪ್ರತಿಷ್ಠಾಪಿಸಲಾಗಿದೆ. ಈ ದೇವಿಯು ಪ್ರಾರಂಭದಲ್ಲಿ ಮಾರಮ್ಮನಾಗಿ ನಂತರ ಶ್ರೀಮಹಾಲಕ್ಷ್ಮಿ ಅವತಾರದಲ್ಲಿ ನೆಲೆಸಿದ್ದಾಳೆ. ದೇವಿಗೆ ಪ್ರಧಾನವಾಗಿ ಎರಡು ಕೈಗಳಿದ್ದು ಬಲಗೈಯಲ್ಲಿ ಸುಮಾರು ಒಂದುವರೆ ಅಡಿ ಉದ್ದದ ಬೆಳ್ಳಿಯ ಕತ್ತಿಯನ್ನು, ಎಡಗೈಯಲ್ಲಿ ಪಾನ್ ಬಟ್ಟಲನ್ನು ಹಾಗೂ ಶುಭ ಸಂದೇಶದ ಸೂಚಕವಾದ ಗಿಳಿಯನ್ನು ತಾಯಿಯ ಎಡ ಕೈ ಮೇಲೆ ಕುಳಿತಿರುವುದನ್ನು ಕಾಣಬಹುದಾಗಿದೆ.

ಈ ತಾಯಿಯು ರಾಕ್ಷಸ ಸಂಹಾರದ ಭಂಗಿಯಲ್ಲಿ ಕುಳಿತಿದ್ದು ತನ್ನ ಮುಖದಲ್ಲಿ ರಾಕ್ಷಸನನ್ನು ಸಂಹಾರ ಮಾಡಿದ ಪ್ರತೀಕವಾಗಿ ರಕ್ತಮಯವಾದ ಕೆಂಪನೆಯ ಮುಖ ಹಾಗೂ ದೇವಿಯ ಬಾಯಿಯಲ್ಲಿ ಎರಡು ಕಡೆ ಸಣ್ಣ ಪ್ರಮಾಣದ ಕೋರೆಹಲ್ಲುಗಳನ್ನು ಹೊಂದಿರುವುದನ್ನು ನೋಡಬಹುದು, ಮತ್ತು ತಾಯಿಯು ತನ್ನ ಬಲಗಾಲನ್ನು ರಾಕ್ಷಸನ ತಲೆ ಬುರುಡೆಯ ಮೇಲೆ ಇಟ್ಟುಕೊಂಡಿರುವ ದೃಶ್ಯವನ್ನು ನಾವು ಇಲ್ಲಿ ಕಾಣಬಹುದಾಗಿದೆ.

ದೇವಿಯ ಪ್ರತಿನಿತ್ಯದ ಪೂಜಾ ಕಾರ್ಯವನ್ನು ನಾಯಕ ಜನಾಂಗದವರು ನಿರ್ವಹಿಸುತ್ತಿದ್ದು ಮುಖ್ಯ ಅರ್ಚಕರೂ ಆಗಿದ್ದಾರೆ. ಇವರೇ ಎಲ್ಲಾ ರೀತಿಯ ಪೂಜಾ ಕಾರ್ಯವನ್ನು ನೆರವೇರಿಸಿ ಕೊಡುತ್ತಾರೆ.

**ಆಹಾರ ಪದ್ಧತಿ / ಹರಕೆಗಳು:** ಈ ದೇವಿಯು ಸಂಪೂರ್ಣವಾಗಿ ಶುದ್ಧ ಚೊಕ್ಕ ಭೋಜನ (ಸಸ್ಯಹಾರಿ) ದವಳಾಗಿದ್ದು, ಮುಖ್ಯವಾಗಿ ಅಕ್ಕಿ ಹಿಟ್ಟಿನಿಂದ ಮಾಡಿದ ತೆಂಬಿಟ್ಟು, ಬೆಲ್ಲದ ಅನ್ನ (ಸಿಹಿಪೊಂಗಲ್), ರುಚಿ ಇಲ್ಲದ ಮೊಸರನ್ನ ತಾಯಿಗೆ ಪ್ರಿಯವಾದದ್ದು. ಆದರೆ ಭಕ್ತಾದಿಗಳು ತಮ್ಮ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸುವ ಸಲುವಾಗಿ ಮುಖ್ಯ ಹರಕೆಗಳನ್ನು ದೇವಿಯ ಬಂಟರಿಗೆ ಕುರಿ, ಕೋಳಿ, ಮೇಕೆ ಹಾಗೂ ಹಂದಿ ಬೇಟೆಯನ್ನು ನೀಡುತ್ತಾರೆ. ಪ್ರಧಾನವಾಗಿ ಮೇಕೆ ಬಲಿಯು ಪ್ರಸಿದ್ಧವಾಗಿದ್ದು ಮೇಕೆಯ ತಲೆಯನ್ನು ಬಲಿಪೀಠದಲ್ಲಿ ಕತ್ತರಿಸಿ ಆ ತಲೆಯ ಮೇಲೆ ದೇವಿಯ ಹಣತೆಯನ್ನು ಹಚ್ಚಿ ದೇವಿಗೆ ಹರಕೆ ಸಲ್ಲಿಸಿ ದೇವಿ ಕೃಪೆಗೆ ಪಾತ್ರರಾಗುತ್ತಾರೆ.

**ವಿಶೇಷ ದಿನಗಳು:** ಈ ದೇವಿಯ ದರ್ಶನವು ವಾರದಲ್ಲಿ ಮುಖ್ಯವಾಗಿ ಮಂಗಳವಾರ, ಶುಕ್ರವಾರ ಹಾಗೂ ಭಾನುವಾರ ಅಭಿಷೇಕದೊಂದಿಗೆ ತಾಯಿಯ ಪೂಜೆಯನ್ನು ಆರಂಭಿಸುತ್ತಾರೆ ಹಾಗೂ ಪ್ರತಿ ಗುರುವಾರ ಯಾರಿಗೆ ಸಂತಾನಫಲ, ಮದುವೆ, ಆಸ್ತಿಪಾಸ್ತಿ ಸಮಸ್ಯೆ, ಜಾನುವಾರುಗಳ ಆರೋಗ್ಯ ಸುಧಾರಣೆಯ ಬಗ್ಗೆ ತಾಯಿಯಲ್ಲಿ ಹೂವನ್ನು ಕೇಳುವ ಪ್ರತೀತಿಯನ್ನು ಇಲ್ಲಿ ಕಾಣಬಹುದು ಹಾಗೂ ಯಾವುದೇ ಮಂತ್ರ, ತಂತ್ರ, ಮಾಟ, ಗಾಳಿ ಹಿಡಿದವರು ಇಲ್ಲಿಗೆ ಬಂದು ದೇವಿಯ ದರ್ಶನ ಪಡೆದು ಹೊರಭಾಗದಲ್ಲಿ ತಡೆಯನ್ನು ಕಳೆಯುವುದರಿಂದ ಈ ರೀತಿಯ ಎಲ್ಲ ಸಮಸ್ಯೆಗಳಿಂದ ಭಕ್ತರು ಮುಕ್ತಿ ಪಡೆದು ತಮ್ಮ ತಮ್ಮ ಹರಕೆಗಳನ್ನು ಬಹಳ ಸಂತೋಷದಿಂದ ಇಂದಿಗೂ ಈ ದೇವಿಯ ಕೃಪೆಗೆ ಪಾತ್ರರಾಗುತ್ತಿರುವುದನ್ನು ಈ ಕ್ಷೇತ್ರದಲ್ಲಿ ನೋಡಬಹುದಾಗಿದೆ.

## 2. ಶ್ರೀ ಚಂದಗೋಳಮ್ಮ ದೇವಿ

**ಸ್ಥಳ:** ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಬೀರಹಳ್ಳಿ ಇಂದ 5 ಕಿಲೋಮೀಟರ್ ಹಾಗೂ ಕೆ.ಆರ್. ಪೇಟೆ ಬಸ್ ನಿಲ್ದಾಣದಿಂದ ಸುಮಾರು 8 ಕಿಲೋಮೀಟರ್ ದೂರದಲ್ಲಿರುವ ಚಂದಗೋಳನ ಹಳ್ಳಿಯಲ್ಲಿ ನೆಲೆಸಿದ್ದಾಳೆ. ಈ ದೇವಿಯು ಈ ಸ್ಥಳದಲ್ಲಿ ನೆಲೆಗೊಂಡ ನಂತರ ಈ ಗ್ರಾಮಕ್ಕೆ ಈ ಹೆಸರಿನಿಂದ ಕರೆಯುವುದು ವಾಡಿಕೆಯಾಗಿದೆ ಎಂದು ಇಲ್ಲಿನ ಐತಿಹಾಸಿಕ ದಾಖಲೆಗಳು ಹೇಳುತ್ತವೆ.

**ಹಿನ್ನೆಲೆ:** ಕೆಲವು ಆಧಾರಗಳ ಪ್ರಕಾರ ಈ ಪ್ರದೇಶವು ಪ್ರಾರಂಭದಲ್ಲಿ ನಿರ್ಜನ ಸ್ಥಳವಾಗಿದ್ದು ಇಲ್ಲಿ ಹೆಚ್ಚಾಗಿ ಕಬ್ಬನ್ನು ಬೆಳೆಯುತ್ತಿದ್ದರೆಂದು, ಇಲ್ಲಿ ಚಂದ(ಸುಂದರ) ವಾದ ಗುಹೆಯೊಂದು ಗೋಚರವಾಗಿದ್ದು, ಈ ಗುಹೆಯ ಒಳಗಿನಿಂದ ಈ ದೇವಿಯು ಮೂಡಿ ಬಂದ ಕಾರಣ ಈ ದೇವಿಗೆ ಈ ರೀತಿಯ ನಾಮಾಂಕಿತವಾಯಿತೆಂದು ನಂಬಲಾಗಿದೆ.

ಪುರಾಣಗಳ ಪ್ರಕಾರ ಈ ದೇವಿಯು ಸ್ವಯಂ ಉದ್ಭವ ಮೂರ್ತಿಯಾಗಿದ್ದು ಇಲ್ಲಿ ಪ್ರಮುಖವಾಗಿ ಎರಡು ದೇವಿ ಶಿಲ್ಪಗಳನ್ನು ಕಾಣಬಹುದಾಗಿದೆ. ಈ ಪ್ರದೇಶದ

ಪಕ್ಕದಲ್ಲಿ ಹೇಮಗಿರಿ ಬೆಟ್ಟ ಕಂಡುಬಂದಿದ್ದು ಇಲ್ಲಿ ಸುತ್ತಮುತ್ತಲಿನ ಜನರು ನದಿಯನ್ನು ದಾಟಿ ಹೋಗುವುದು ಅಸಾಧ್ಯವಾದ ಕಾರಣ ಈ ನದಿಗೆ ಒಂದು ಸೇತುವೆಯನ್ನು ನಿರ್ಮಿಸಲು ಮುಂದಾದರು. ಆದರೆ ಕೊನೆಯ ಸೇತುವೆಯ ಕಂಬವು ಸ್ಥಿರವಾಗಿ ನಿಲ್ಲದೆ ಇದ್ದ ಕಾರಣ ಸೇತುವೆ ಕಾರ್ಯವು ಪೂರ್ಣಗೊಳ್ಳಲಿಲ್ಲ. ಇಂತಹ ಸಂದರ್ಭದಲ್ಲಿ ಒಬ್ಬ ವಯಸ್ಸಾದ ಮುದುಕನಿಗೆ ತಾಯಿಯು ಕನಸಿನಲ್ಲಿ ಬಂದು ಈ ಸೇತುವೆ ನಿಲ್ಲಬೇಕಾದರೆ ನನಗೆ ಐದು ಮಂದಿ ಹೆಣ್ಣು ಮಕ್ಕಳಿಂದ ಕಳಸ ಹೊರಿಸಿ ಮೆರವಣಿಗೆಯ ಸಮೇತ ಪೂಜೆ ಸಲ್ಲಿಸಿದರೆ ಈ ಸೇತುವೆಯು ಸ್ಥಿರವಾಗಿ ನಿಲ್ಲುತ್ತದೆ ಎಂದು ವಾಗ್ದಾನ ನೀಡಿದಳು. ಅದರಂತೆ ಈ ಪ್ರಕ್ರಿಯೆಯನ್ನು ನೆರವೇರಿಸಿದ ನಂತರ ಈ ಸೇತುವೆಯು ಗಟ್ಟಿಯಾಗಿ ನಿಂತಿತೆಂದು ಇಲ್ಲಿನ ಮಾಹಿತಿಗಳಿಂದ ತಿಳಿದುಬಂದಿದೆ.

**ಪ್ರತಿಮಾಶಾಸ್ತ್ರ:** ಈ ದೇವಿಯು ಸ್ವಯಂ ಉದ್ಭವ ಮೂರ್ತಿಯಾಗಿದ್ದು ತನ್ನ ಅರ್ಧದಷ್ಟು ರೂಪವನ್ನು ಮಾತ್ರ ಹೊರಗೆ ಹಾಗೂ ಉಳಿದ ಭಾಗವು ಈ ಗುಹೆಗೆ ಹೊಂದಿಕೊಂಡಂತೆ ಮೂಡಿಬಂದಿದ್ದಾಳೆ. ಈ ದೇವಿಯು ಕಪ್ಪು ಶಿಲೆಯಿಂದ ಕೂಡಿದ್ದು ಇಲ್ಲಿ ಅಕ್ಕ ತಂಗಿಯಾಗಿ ಚಂದಗೋಳಮ್ಮ ಮತ್ತು ಲಕ್ಷ್ಮೀದೇವಿ ಇಬ್ಬರೂ ಸಹ ಒಂದೇ ರೂಪದಲ್ಲಿ ಒಂದುವರೆ ಅಡಿ ಎತ್ತರದಲ್ಲಿ ಕುಳಿತ ಭಂಗಿಯಲ್ಲಿ ಗೋಚರಿಸುತ್ತಾರೆ. ಈ ತಾಯಿಗೆ ಯಾವುದೇ ಅರ್ಚಕರಿಲ್ಲ, ಬದಲಾಗಿ ಭಕ್ತಾದಿಗಳೇ ಸ್ವಯಂ ಪೂಜೆ ಮತ್ತು ಹರಕೆಯನ್ನು ತಾವಾಗಿಯೇ ಸಲ್ಲಿಸಬೇಕಾಗುತ್ತದೆ. ಈ ದೇವಿಗೆ ತನ್ನದೇ ಆದ ನಿರ್ದಿಷ್ಟ ರೂಪವಿಲ್ಲದೆ, ಸಂಪೂರ್ಣವಾಗಿ ಕೇಶವಲಂಕಾರವಿಲ್ಲದ, ಬರೀ ತಲೆಯಲ್ಲಿ ಕಂಡುಬರುತ್ತಾರೆ. ಈ ದೇವಿಗೆ ಹಿಂಭಾಗದಲ್ಲಿ ಹಿತ್ತಾಳೆಯಿಂದ ಮಾಡಿದ ಕೀರ್ತಿ ಮುಖದ ಪ್ರಭಾವಳಿಯನ್ನು ನೋಡಬಹುದಾಗಿದೆ.

**ಆಹಾರ / ಹರಕೆಗಳು:** ಈ ದೇವಿಗೆ ಶುದ್ಧವಾದ ಚೊಕ್ಕ ಭೋಜನದವಳಾಗಿದ್ದು(ಸಸ್ಯಹಾರಿ) ಮುಖ್ಯವಾಗಿ ಸಜ್ಜಿಗೆ, ಖಾರ ಪೊಂಗಲ್, ಮೊಸರನ್ನ ಪ್ರಿಯವಾಗಿದೆ. ಇಲ್ಲಿ ಪ್ರತಿ ಮಂಗಳವಾರ, ಶುಕ್ರವಾರ, ಭಾನುವಾರ ಸಾಮಾನ್ಯವಾಗಿ ಪೂಜಾ ಕಾರ್ಯವು ನೆರವೇರುತ್ತಿದ್ದು, ಅದರಲ್ಲೂ ಭೀಮನ ಅಮಾವಾಸ್ಯೆ, ಹುಣ್ಣಿಮೆ ದಿನಗಳಲ್ಲಿ ವಿಶೇಷವಾಗಿ ಅಲಂಕಾರ ಪೂಜೆಯನ್ನು ಕೈಗೊಳ್ಳುವರು ಹಾಗೂ ಸಂತಾನ, ಶತ್ರುಕಾಟ, ಗಾಳಿಹಿಡಿದವರು ಹಾಗೂ ಕುಟುಂಬ ಸಮಸ್ಯೆಗಳು, ನ್ಯಾಯಾಲಯ ವಿವಾದಗಳು ಏನೇ ಇದ್ದರೂ ಇಲ್ಲಿ ಬಂದು ದರ್ಶನ ಪಡೆದು ತಮ್ಮ ಹರಕೆಗಳನ್ನು ಕಟ್ಟಿಕೊಳ್ಳುತ್ತಾರೆ ಮತ್ತೆ ಈ ದೇವಿಗೆ ಹಂದಿ ಬೇಟೆಯು ಪ್ರಧಾನವಾದ ಕಾರಣ ಈ ರೀತಿಯ ಕುರಿ, ಮೇಕೆ, ಕೋಳಿ ಹಂದಿಯನ್ನು ತಮ್ಮ ಹರಕೆಗಳು ಯಶಸ್ಸು ಆದ ಮೇಲೆ ಇಲ್ಲಿ ಬಹಳ ಸಂತೋಷದಿಂದ ನೆರವೇರಿಸಿ ಈ ಮೂಲಕ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ.

**3. ಶ್ರೀ ಅಹಲ್ಯದೇವಿ**

**ಸ್ಥಳ:** ಈ ದೇವಿಯು ಶ್ರೀರಂಗಪಟ್ಟಣ ತಾಲೂಕು ಮಂಡ್ಯ ಜಿಲ್ಲೆಯ ಆರತಿ ಉಕ್ಕಡ ಎಂಬ ಗ್ರಾಮದಲ್ಲಿ ಕಂಡುಬರುತ್ತದೆ. ಇಲ್ಲಿಗೆ ಪಾಂಡವಪುರ ರೈಲ್ವೆ ನಿಲ್ದಾಣದಿಂದ ಸುಮಾರು 7 ಕಿಲೋಮೀಟರ್ ಕೆ.ಆರ್.ಎಸ್ ನಿಂದ 15 ಕಿಲೋಮೀಟರ್, ಶ್ರೀರಂಗಪಟ್ಟಣದಿಂದ 10 ಕಿಲೋಮೀಟರ್ ಅಂತರದಲ್ಲಿದ್ದು ಈ ದೇವಿಯು ಇಲ್ಲಿ ಪ್ರಾರಂಭದಲ್ಲಿ ಮಾರಮ್ಮನಾಗಿ, ನಂತರ ಇಲ್ಲಿನ ಸುತ್ತಮುತ್ತಲಿನ ಗ್ರಾಮವನ್ನು ಕಾಯುವ ಗ್ರಾಮ ದೇವತೆಯಾಗಿ ಕಂಡುಬರುತ್ತಾಳೆ.

**ಹಿನ್ನೆಲೆ:** ಈ ದೇವಿಯು ನೆಲೆಸಿರುವ ಈ ಪ್ರದೇಶವು ಈ ಹಿಂದೆ ಮಹಾಮುನಿಯಾದ ಗೌತಮ ಋಷಿಯ ಆಶ್ರಮವಾಗಿದ್ದು ಈಕೆಯು ಈ ಋಷಿಯ ಧರ್ಮಪತ್ನಿಯಾಗಿದ್ದು ಈ ಪ್ರಶಾಂತ ಪರಿಸರಕ್ಕೆ ಮಾರುಹೋದ ದೇವೇಂದ್ರನಿಗೆ ತುಂಬಾ ದಾಹವಾಗಿತ್ತು. ನೀರನ್ನು ಕುಡಿದರೂ ಅವನಿಗೆ ದಾಹ ತಣಿಯಲಿಲ್ಲ ಕಾರಣ ಗೌತಮರ ಆಶ್ರಮದಲ್ಲಿದ್ದ ಈ ಅಹಲ್ಯ ಎಂಬ ಹೆಣ್ಣಿನ ಅತಿಯಾದ ಸೌಂದರ್ಯವು ಆತನನ್ನು ಮನಸೂರೆ ಮಾಡಿತ್ತು. ಈ ಕಾರಣದಿಂದ ದೇವೇಂದ್ರ ಹೇಗಾದರೂ ಮಾಡಿ ಈಕೆಯನ್ನು ನನ್ನವಳಾಗಿ ಮಾಡಿಕೊಳ್ಳಬೇಕೆಂಬ ಕೆಟ್ಟ ಆಲೋಚನೆ ಇವರ ತಲೆಯಲ್ಲಿ ತುಂಬಿಕೊಂಡಿತ್ತು.

ಇದರ ಪರಿಣಾಮ ಅಹಲ್ಯ ಇದಕ್ಕೆ ಒಪ್ಪದ ಕಾರಣ ದೇವೇಂದ್ರನು ತಾನೇ ಮಾಯಾವಿ ಕೋಳಿಯಾಗಿ ಋಷಿವರ್ಯರನ್ನು ಮಾಯಾಜಾಲದಿಂದ ಕೋಳಿಯಂತೆ ಕೂಗತೊಡಗಿದನು. ಇದರಿಂದ ಎಚ್ಚರಗೊಂಡ ಗೌತಮ ಋಷಿಯು ಬೆಳಗಾಯಿತೆಂದು ಸ್ನಾನ ಮಾಡಲು ನದಿಯತ್ತ ಹೊರಟರು. ಆದರೆ ಈ ಸಮಯದಲ್ಲಿ ಗಂಗೆಯು ನಿದ್ದೆಯಿಂದ ಎದ್ದು "ನಾನು ಇನ್ನು ನಿದ್ದೆಯಲ್ಲಿ ಇದ್ದೇನೆ, ಬೆಳಕು ಹರಿಯುವ ಮುನ್ನ ಸ್ನಾನಕ್ಕೆ ಬಂದಿದ್ದೀರಿ" ಎಂದಾಗ ಗೌತಮರು ಆಶ್ಚರ್ಯಗೊಂಡು ನಾನು ಎಂದಿನಂತೆ ಕೋಳಿ ಕೂಗಿದ ನಂತರವೆ ಬಂದಿರುವುದಾಗಿ ಹೇಳಿದರು. ಆಗ ಗಂಗಾಮಾತೆ ಇಂದೇಕೋ ಏನೋ ಅವಘಡ ನಡೆಯುತ್ತದೆ ಬೇಗ ಆಶ್ರಮಕ್ಕೆ ಹೋಗಿ ಎನ್ನುತ್ತಾಳೆ. ಅದರಂತೆ ಮಹರ್ಷಿಗಳು ಆಶ್ರಮದ ಕಡೆ ಬಂದಾಗ ಅಷ್ಟರಲ್ಲಿ ಮಾಯಾವಿ ಇಂದ್ರ ಗೌತಮರ ವೇಷದಲ್ಲಿ ಅಹಲ್ಯೆಯನ್ನು ಪೀಡಿಸುತ್ತಿರುತ್ತಾನೆ. ಇದನ್ನು ಅರಿತ ಗೌತಮ ಋಷಿಯು ಹಿಂದೆ ಮುಂದೆ ಯೋಚಿಸದೆ ತನ್ನ ಪತ್ನಿಗೆ ಶಾಪವನ್ನು ನೀಡಿ ಅಲ್ಲಿಯೇ ಕಲ್ಲಾಗುವಂತೆ ಮಾಡಿದನು.

ಇದರಿಂದ ಮನ ನೋಂದ ಇಂದ್ರ ಋಷಿಯ ಕಾಲನ್ನು ಹಿಡಿದು ತನ್ನ ತಪ್ಪನ್ನು ಮನ್ನಿಸುವಂತೆ ಬೇಡಿಕೊಳ್ಳುತ್ತಾನೆ. ಇದರಿಂದ ಕೋಪಗೊಂಡ ಗೌತಮರು "ಋಷಿ ಪತ್ನಿಯನ್ನು ಪ್ರೀತಿಸಿದ ಕಾರಣ ನಿನ್ನ ದೇಹದಲ್ಲೆಲ್ಲಾ ಕಣ್ಣುಗಳಾಗಿ, ಅವುಗಳೆಲ್ಲಾ ಹುಣ್ಣಾಗಿ ಕೀವು ಸದಾ ಸೋರುತ್ತಿರಲಿ" ಎಂದು ಈ ಜಗತ್ತು ನಿನ್ನನ್ನು ನೋಡಿ ಅಸಹ್ಯ

ಪಡುವಂತಾಗಲಿ ಎಂದು ಶಾಪವಿತ್ತರು. ಆದರೆ ಈಗಾಗಲೇ ಏನು ತಪ್ಪನ್ನು ಮಾಡದೆ ಕಲ್ಲಾಗಿರುವ ಅಹಲ್ಯಯು ತನ್ನ ಪತಿಗೆ ಶಾಪವಿಮೋಚನೆಗೊಳಿಸು ಎಂದು ಕೇಳಿಕೊಂಡಳು. ಆದರೆ ಒಂದು ಬಾರಿ ಕೊಟ್ಟ ಶಾಪವನ್ನು ಹಿಂಪಡೆಯುವ ಅವಕಾಶವಿಲ್ಲವೆಂದು ಇದಕ್ಕೆ ಪರಿಹಾರವಾಗಿ ಶ್ರೀರಾಮನ ಪಾದಸ್ಪರ್ಶದಿಂದ ಮಾತ್ರ ಇದು ಸಾಧ್ಯವೆಂದು ತಿಳಿಸಿದರು.

ಅದರಂತೆ ಏಕಪತಿವ್ರತಸ್ಥನಾದ ಶ್ರೀರಾಮನು ತನ್ನ ಕುಟುಂಬ ಸಮೇತವಾಗಿ ಇದೇ ಮಾರ್ಗದಲ್ಲಿ ಬರುವಾಗ ಇವನ ಪಾದ ಈ ಕಲ್ಲು ಬಂಡೆಗೆ ಸ್ಪರ್ಶಿಸಿದ ಕಾರಣ ಅಹಲ್ಯ ಶಾಪ ವಿಮೋಚನೆಯಿಂದ ಮರಳಿ ತನ್ನ ಸೌಂದರ್ಯ ಪಡೆದಳು ಹಾಗೂ ದೇವತೆಗಳು ಎಲ್ಲಾ ಸ್ವರ್ಗದಿಂದ ಇಲ್ಲಿಗೆ ಬಂದು ಈಕೆಗೆ ಯಾವ ವರ ಬೇಕೆಂದು ಕೇಳು ಎಂದಾಗ ಈ ದೇವಿಯು ಈಗಾಗಲೇ ನನ್ನ ಸೌಂದರ್ಯವೇ ನನಗೆ ಮಿತ್ತಾದ ಕಾರಣ ನನಗೆ ಸೌಂದರ್ಯ ಬೇಡವೆಂದು ಹೇಳಿದಾಗ ಪರಮೇಶ್ವರನು ಈ ಭೂಲೋಕದಲ್ಲಿ ಲಕ್ಷಾಂತರ ಸುಂದರ ಮಹಿಳೆಯರು ನಿನ್ನಂತೆಯೇ ಕಷ್ಟ ಅನುಭವಿಸುತ್ತಿದ್ದಾರೆ. ಆದ ಕಾರಣ ದುಷ್ಟರನ್ನು ಶಿಕ್ಷಿಸಲು ಶಕ್ತಿದೇವತೆಯಾದ ಆರತಿ ಉಕ್ಕಡ ಮಾರಮ್ಮನಾಗಿ ಅವತರಿಸಿ ಎಂದು ವರ ನೀಡಿ ಮಾಯವಾಗುತ್ತಾರೆ.

ಹೀಗೆ ದೇವತೆಗಳ ಅನುಗ್ರಹದಿಂದ ಅಹಲ್ಯದೇವಿ ಮಾರಮ್ಮಳಾಗಿ ಮರದ ಕೊರಡಿನ ಮೂರ್ತಿಯ ರೂಪ ತಾಳಿ ಕಾವೇರಿ ನದಿಯಲ್ಲಿ ಗ್ರಾಮದ ಬೆಸ್ತ ಜನಾಂಗದವರಿಗೆ ದೊರೆಯುತ್ತಾಳೆ ಹಾಗೂ ಅವರಿಂದಲೇ ಪ್ರತಿನಿತ್ಯ ಪೂಜೆಯನ್ನು ಸಲ್ಲಿಸಿಕೊಳ್ಳುತ್ತಿದ್ದಾಳೆ.

**ಪ್ರತಿಮಾಶಾಸ್ತ್ರ:** ಈ ದೇವಿಯನ್ನು ಸಂಪೂರ್ಣವಾಗಿ ಕಪ್ಪು ಮರದ ಕೊರಡಿನಿಂದ ನಿರ್ಮಿಸಲಾಗಿದ್ದು ಈ ದೇವಿಯ ಸುಮಾರು ಒಂದುವರೆ ಅಡಿ ಎತ್ತರದಲ್ಲಿ ತನ್ನ ಪೀಠದಿಂದ ಪ್ರತಿಷ್ಠಾಪಿಸಲಾಗಿದೆ. ಈ ದೇವಿಯನ್ನು ಬೆಳ್ಳಿಯ ಕಿರೀಟದಿಂದ ತಾಯಿಯ ಕಣ್ಣುಗಳನ್ನು ಬೆಳ್ಳಿ ಮತ್ತು ಚಿನ್ನದ ಲೋಹದಿಂದ ಅಲಂಕರಿಸಿ ವಾರದಲ್ಲಿ ಮೂರು ದಿನಗಳು ಸಾವಿರಾರು ಭಕ್ತರಿಗೆ ಶಕ್ತಿ ದೇವತೆಯಾಗಿ ಕಷ್ಟಗಳನ್ನು ಪರಿಹರಿಸುತ್ತಾಳೆ.

**ಆಹಾರ / ಹರಕೆ:** ಈ ದೇವಿಗೆ ಮುಖ್ಯವಾಗಿ ಸಕ್ಕರೆ ಪೊಂಗಲ್, ತಂಬಿಟ್ಟಿನ ಆರತಿ, ಬೆಲ್ಲದ ಆರತಿ, ನಿಂಬೆಹಣ್ಣಿನ ಆರತಿ, ಮೊಸರನ್ನ, ಪಂಚಾಮೃತ, ಎಳನೀರು ಪ್ರಿಯವಾಗಿದ್ದು ಈ ದೇವಿಯ ಬಳಿಯಲ್ಲಿ ಯಾವುದೇ ಸಮಸ್ಯೆಯಿಂದ ಬಳಲುತ್ತಿರುವ ಭಕ್ತರು ಇಲ್ಲಿಗೆ ಬಂದು ಇಲ್ಲಿನ ತಡೆ ಹೊಡೆಯುವ ಪದ್ಧತಿಯನ್ನು ನೆರವೇರಿಸಿದರೆ ಎಲ್ಲಾ ಪಾಪಗಳು ಇಲ್ಲಿಯೇ ಕಳೆಯುವುದೆಂದು ನಂಬಲಾಗಿದೆ.

## 4. ಶ್ರೀ ಬೆಟ್ಟದ ಅರಸಮ್ಮ ದೇವಿ

**ಸ್ಥಳ:** ಈ ದೇವಿಯು ಮುಖ್ಯವಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಹೋಬಳಿಯ ಗುಂಡಾಪುರ ಎಂಬ ಗ್ರಾಮದಲ್ಲಿ ನೆಲೆಸಿದ್ದಾಳೆ. ಇಂದರೆ ಈ ದೇವಾಲಯವು ಬೆಂಗಳೂರು ರಾಷ್ಟ್ರೀಯ ಹೆದ್ದಾರಿ(209)ಯಲ್ಲಿ ಹಾಗೂ ಬೆಂಗಳೂರಿನಿಂದ(88 ಕಿ.ಮೀ, ಮಂಡ್ಯದಿಂದ 47 ಕಿ.ಮೀ. ಮೈಸೂರಿನಿಂದ 74 ಕಿಲೋಮೀಟರ್ ತುಮಕೂರಿನಿಂದ 134 ಕಿಲೋಮೀಟರ್ ಮತ್ತು ಹಲಗೂರಿನಿಂದ 4 ಕಿಲೋಮೀಟರ್ ದೂರದಲ್ಲಿ ಕೇಂದ್ರೀಕರಣಗೊಂಡಿದೆ. ಈ ದೇವಾಲಯವು ಸುಮಾರು 600 ರಿಂದ 700 ವರ್ಷಗಳಷ್ಟು ಪುರಾತನವಾದ ದೇವಾಲಯವಾಗಿದೆ ಎಂದು ಇಲ್ಲಿನ ಆಧಾರಗಳಿಂದ ದೃಢೀಕರಿಸಲಾಗಿದೆ.

**ಹಿನ್ನೆಲೆ:** ಈ ದೇವಿಯು ಹೆಬ್ಬೆಟ್ಟು ಬಸವೇಶ್ವರನ ತಂಗಿ ಎಂಬ ಪ್ರತಿತಿ ಇದೆ ಹಾಗೂ ಈ ದೇವಾಲಯವು ಬಸವನ ಬೆಟ್ಟದ ತಳದಲ್ಲಿ ಕೇಂದ್ರೀಕರಿಸುವುದರಿಂದ ಈ ದೇವಿಗೆ ಬೆಟ್ಟದ ಅರಸಮ್ಮ ಎಂಬ ವಾಡಿಕೆ. ಇವಳು ಇಲ್ಲಿನ ಗ್ರಾಮದ ಶಕ್ತಿ ದೇವತೆಯಾಗಿ, ಸ್ವಯಂ ಉದ್ಭವ ಮೂರ್ತಿಯಾಗಿದ್ದು ಇಲ್ಲಿ ಪ್ರತಿನಿತ್ಯ ಭಕ್ತಾದಿಗಳಿಂದ ವಿಶೇಷ ಪೂಜಾ ಕಾರ್ಯವನ್ನು ನೆರವೇರಿಸಿಕೊಳ್ಳುತ್ತಿದ್ದಾಳೆ. ಪುರಾಣಗಳ ಪ್ರಕಾರ ಈ ಮಾರ್ಗದಲ್ಲಿ ಲಂಬಾಣಿ ವ್ಯಾಪಾರಿಗಳು ವ್ಯಾಪಾರಕ್ಕಾಗಿ ಈ ಮಾರ್ಗದಲ್ಲಿ ಸಂಚರಿಸುತ್ತಿರುವಾಗ, ಒಂದು ದಿನ ವ್ಯಾಪಾರ ಮುಗಿಸಿ ಹಿಂದಿರುಗುವ ಸಮಯದಲ್ಲಿ ರಾತ್ರಿಯಾದ ಕಾರಣ ಇಲ್ಲಿ ತಂಪಾದ ಬೆಟ್ಟದ ಆಲಯದ ಮರದ ತಳದಲ್ಲಿ ತಂಗಿ ಮತ್ತೆ ಬೆಳಿಗ್ಗೆ ತಮ್ಮ ವ್ಯಾಪಾರಕ್ಕೆ ಹೋಗಬಹುದು ಎಂದು ನಿರ್ಧರಿಸಿ ಈ ಸ್ಥಳದಲ್ಲಿ ಬೀಡುಬಿಟ್ಟರು.

ನಂತರ ರಾತ್ರಿ ವೇಳೆ ಊಟವನ್ನು ತಯಾರಿಸಬೇಕಾದ ಕಾರಣ ತಾವು ತಂದಿದ್ದ ಪಾತ್ರೆಗಳನ್ನು ತೆಗೆದು ಆರದ ಮರದ ಕೆಳಗೆ ಉದ್ಭವವಾಗಿದ್ದ ಈ ದೇವಿಯ ಶಿಲೆಯೊಂದಿಗೆ ಇತರ ಎರಡು ಕಲ್ಲುಗಳನ್ನು ಜೋಡಿಸಿ ಪಾತ್ರೆಯನ್ನು ಇಟ್ಟು ಅನ್ನ ಮಾಡಲು ಸೌದೆಯನ್ನು ಹಾಕಿದರು. ಆದರೆ ಎಷ್ಟೇ ಸೌದೆಯನ್ನು ಹಚ್ಚಿದರೂ ನೀರು ಸ್ವಲ್ಪವೂ ಕೂಡ ಬೆಚ್ಚಗಾಗಲಿಲ್ಲ. ಇದರ ಪರಿಣಾಮ ತಾಯಿಯು (ಅವನ) ವ್ಯಾಪಾರಿಯ ಕನಸಿನಲ್ಲಿ ಬಂದು ತನ್ನ ಮಹಿಮೆಯನ್ನು ವಿವರಿಸಿದಳು. ಇದನ್ನು ತಿಳಿದ ಲಂಬಾಣಿ ವ್ಯಾಪಾರಸ್ಥ ಈಗಾಗಲೇ ವ್ಯಾಪಾರ ಮಾಡಿ ಸಂಪಾದಿಸಿದ್ದ ಹಣವನ್ನು ಈ ದೇವಿಯ ದೇವಾಲಯವನ್ನು ನಿರ್ಮಾಣ ಮಾಡಲು ನಿರ್ಧರಿಸಿದನು. ಇಲ್ಲಿಂದ ಈ ದೇವತೆಗೆ ಸಂಪ್ರದಾಯ ಬದ್ಧವಾಗಿ ಪೂಜಾ ಕಾರ್ಯಗಳು ಪ್ರಾರಂಭವಾಯಿತು

**ಪ್ರತಿಮಾಶಾಸ್ತ್ರ:** ಈ ಅರಸಮ್ಮ ದೇವಿಯು ಈ ಗ್ರಾಮದ ಶಕ್ತಿ ದೇವತೆ ಮತ್ತು ಊರ ಕಾಯುವ ಗ್ರಾಮದೇವತೆಯಾಗಿದ್ದು ಪೂರ್ಣ ಪ್ರಮಾಣದಲ್ಲಿ ಕಪ್ಪು ಶಿಲೆಯ ರೂಪದಲ್ಲಿ ಸ್ವಯಂ ಉದ್ಭವವಾದ ಮೂರ್ತಿಯಾಗಿದ್ದಾಳೆ. ಈ ತಾಯಿಯು ಮೂಲ

ಪೀಠದಿಂದ ಸುಮಾರು ಒಂದುವರೆ ಅಡಿ ಎತ್ತರವಿರುವ ದೇವಿಯಾಗಿದ್ದು ದೇವಿಯು ಸ್ಥಾನಕ (ನಿಂತಿರುವ) ಭಂಗಿಯಲ್ಲಿ ಮೂಡಿಬಂದಿದ್ದಾಳೆ. ತಾಯಿಯ ಮುಖದಲ್ಲಿ ಸೌಮ್ಯತೆಯನ್ನು ಹಾಗೂ ಪ್ರಧಾನವಾದ ಎರಡು ಕೈಗಳಿದ್ದು ದೇವಿಯು ತನ್ನ ಎರಡು ಕೈಗಳನ್ನು ಅಭಯ ಮತ್ತು ಅನುಗ್ರಹದ ಹಸ್ತದಿಂದ ಎಲ್ಲಾ ಸಮಸ್ತ ಭಕ್ತಾದಿಗಳ ಕಷ್ಟ ಕಾರ್ಪಣ್ಯಗಳನ್ನು ಇಂದಿಗೂ ಬಗೆಹರಿಸುವಲ್ಲಿ ತನ್ನ ವೈಶಿಷ್ಟ್ಯವನ್ನು ಹೊಂದಿದ್ದಾಳೆ.

**ಜಾತ್ರೆ / ಹರಕೆ:** ಈ ದೇವಿಗೆ ಮುಖ್ಯವಾಗಿ ಬಾಳೆಹೊನ್ನಿನ ಬಸವನಹಳ್ಳಿ, ನಂದಿಪುರ, ಗುಂಡಾಪುರ, ಹೊನಗನಹಳ್ಳಿ, ಕೆಂಪಯ್ಯನ ದೊಡ್ಡಿ ಗ್ರಾಮದ ಜನರು ಕಾರ್ತಿಕ ಮಾಸದ ಕೊನೆಯ ಮಂಗಳವಾರ ಲಕ್ಷ ದೀಪೋತ್ಸವವನ್ನು ನಡೆಸುತ್ತಾರೆ ಹಾಗೂ ಸುಮಾರು ಹದಿನೈದು ದಿನಗಳ ಜಾತ್ರಾ ಸಮಯದಲ್ಲಿ ಸಂಭ್ರಮದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ದೇವಿಯ ಉತ್ಸವದಲ್ಲಿ ಕರಗವನ್ನು ಮುಖ್ಯ ಅರ್ಚಕರು ಹೊತ್ತು ಹೆಬ್ಬಾರೆಯ ನಾದ ಮತ್ತು ಶಬ್ದಕ್ಕೆ ತಾಯಿ ಮೈದುಂಬಿ ನೃತ್ಯವನ್ನು ಮಾಡುತ್ತಾ ಮಡಿಯ ಮಲೆ ಬರುತ್ತಾಳೆ. ಈ ವೇಳೆಯಲ್ಲಿ ಪಕ್ಕದ ಊರಾದ ಬಾಳೆಹೊನ್ನಿನ ಗ್ರಾಮದವರು ಸಂಪ್ರದಾಯದಂತೆ 'ಪರದೇಶಿಗಳು' ಎಂಬ ವೇಷ-ಭೂಷಣವನ್ನು ಧರಿಸಿ ಈ ದೇವಿಯನ್ನು ಬರಮಾಡಿಕೊಳ್ಳುತ್ತಾರೆ.

ಪ್ರಮುಖ ಹರಕೆಗಳಾದ ಸಂತಾನಫಲ, ಮದುವೆ, ಜಾನುವಾರುಗಳ ಪಂಜಿನ ಸೇವೆ, ಪಾನಕ ಉತ್ಸವ, ಬಾಯಿಬೀಗ, ಓಲೆಬಂಡಿ ಜೊತೆಗೆ ಎಲ್ಲಾ ಜಾನುವಾರುಗಳಿಗೆ ಆರೋಗ್ಯ ಭಾಗ್ಯ ದೊರಕಲೆಂದು ಜಾತ್ರೆಯ ಸಂದರ್ಭದಲ್ಲಿ ಮುಖ್ಯ ಬೀದಿಗಳಲ್ಲಿ ತಾವೇ ಹರಕೆಯನ್ನು ತೀರಿಸುವ ಸಲುವಾಗಿ ಮಜ್ಜಿಗೆ, ಹೆಸರುಬೇಳೆ, ಬೆಲ್ಲದ ಪಾನಕ ಮುಂತಾದವುಗಳನ್ನು ಭಕ್ತಾದಿಗಳಿಗೆ ನೀಡಿ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ.

## 5. ಶ್ರೀ ಮದ್ದೂರಮ್ಮ ದೇವಿ

**ಸ್ಥಳ:** ಮದ್ದೂರು ಎಂಬುದು ಮಂಡ್ಯ ಜಿಲ್ಲೆಯಲ್ಲಿ ಕಂಡುಬರುವ ಒಂದು ಪ್ರಮುಖ ತಾಲೂಕು ಕೇಂದ್ರವಾಗಿದ್ದು ಇದು ಮಂಡ್ಯದಿಂದ 22 ಕಿಲೋಮೀಟರ್ ದೂರದಲ್ಲಿ ನೆಲೆಗೊಂಡಿದೆ. ಈ ದೇವಾಲಯ ಬೆಂಗಳೂರು, ಮೈಸೂರು ಮುಖ್ಯ ರಸ್ತೆಯಲ್ಲಿನ ಮದ್ದೂರು ಪಟ್ಟಣದ ಮುಖ್ಯ ರಸ್ತೆಯ ಎಡ ಭಾಗದಲ್ಲಿ ಗೋಚರಗೊಂಡಿದೆ. ಇಲ್ಲಿ ಅರ್ಜುನನು ತಪಸ್ಸನ್ನು ಮಾಡಿದ ಕಾರಣಕ್ಕೆ ಇದಕ್ಕೆ 'ಅರ್ಜುನಪುರಿ' ಎಂಬ ವಾಡಿಕೆ ಇದೆ. ಈ ದೇವಿಯು ಮುಖ್ಯವಾಗಿ ಇಲ್ಲಿನ ಗ್ರಾಮದ ಶಕ್ತಿ ದೇವತೆಯಾಗಿ ನೆಲೆಗೊಂಡಿದ್ದಾಳೆ.

**ಹಿನ್ನೆಲೆ:** ಈ ದೇವಿಯು ಮೂಲತಃ ಕೊಡಗಿನಿಂದ ಬಂದ ತಾಯಿಯಾಗಿದ್ದು ಅಲ್ಲಿ ಸರಿಯಾದ ಪೂಜೆಗಳು ನೆರವೇರದ ಕಾರಣ ತಾಯಿ ಅಲ್ಲಿಂದ ವಲಸೆ ಬಂದು ಇಲ್ಲಿನ ಒಡೆಯನಾದ ನರಸಿಂಹಸ್ವಾಮಿಯ ಅನುಮತಿ ಪಡೆದು ಇಲ್ಲಿಯೇ

ಪ್ರತಿಷ್ಠಾಪನೆಯಾದಳೆಂದು ಐತಿಹಾಸಿಕ ದಾಖಲೆಗಳು ತಿಳಿಸುತ್ತವೆ. ಕೊಡಗಿನ ಒಬ್ಬ ಅಡಿಕೆ ವ್ಯಾಪಾರಿ ತನ್ನ ಬೆಳೆಯನ್ನು ಮಾರಿ ವಾಪಸ್ಸು ಬರುವಾಗ ಸಂಜೆಯಾದ ಕಾರಣ ಈ ಸ್ಥಳದಲ್ಲಿ ಉಳಿಯಲು ಹೆದರಿದ. ಕಾರಣ ಈ ಪ್ರದೇಶವು ಹೊಸ ಜಾಗವಾಗಿದ್ದು ತನ್ನ ಹತ್ತಿರ ಅಡಿಕೆ ವ್ಯಾಪಾರದ ಅಗಾದ ಹಣವನ್ನು

ತನ್ನ ಚೀಲದಲ್ಲಿ ಇಟ್ಟುಕೊಂಡಿದ್ದು, ದಾರಿಯ ಮಧ್ಯದಲ್ಲಿ ಕಳ್ಳಕಾಕರು ನನಗೆ ತೊಂದರೆ ಕೊಟ್ಟು ಕದ್ದು ಹೋದರೆ ಏನು ಮಾಡುವುದು ಎಂದು ಈ ಮದ್ದೂರಿನಲ್ಲಿ ಈ ದೇವಿಯನ್ನು ನೆನೆದು ಮಲಗಿದನು.

ಆದರೆ ಇವನ ಕನಸಿನಲ್ಲಿ ದೇವಿಯು ಪ್ರತ್ಯಕ್ಷವಾಗಿ ಆತನನ್ನು ಈ ಸಮಸ್ಯೆಯಿಂದ ಕಾಪಾಡಿದ ಕಾರಣ ಆ ವ್ಯಾಪಾರಿಯು ತನ್ನ ಎಲ್ಲಾ ಹಣ ಮತ್ತು ಸಂಪತ್ತನ್ನು ಈ ದೇವಿಯ ದೇವಾಲಯಕ್ಕೆ ಮುಡಿಪಾಗಿಟ್ಟನೆಂದು ಇಲ್ಲಿನ ಮೂಲಾಧಾರಗಳಿಂದ ತಿಳಿದುಬಂದಿದೆ.

**ಪ್ರತಿಮಾಶಾಸ್ತ್ರ:** ಈ ದೇವಿಯು ಕಪ್ಪು ಶಿಲೆಯಿಂದ ನಿರ್ಮಿಸಲ್ಪಟ್ಟಿದ್ದು ಸುಮಾರು 5 ಅಡಿ ಎತ್ತರದಲ್ಲಿ ಸ್ಥಾನಿಕ ಭಂಗಿಯಲ್ಲಿ ಗೋಚರವಾಗಿದ್ದಾಳೆ ಹಾಗೂ ತಾಯಿಯ ಮುಖದಲ್ಲಿ ಕ್ರೋಧವು ಮತ್ತು ಕೋಪವನ್ನು ವ್ಯಕ್ತಪಡಿಸುತ್ತಿದ್ದು ಈ ದೇವಿಯು ಸಪ್ತಮಾತೃಕೆ ಸಾಲಿನಲ್ಲಿ ನಿಂತ ಭಂಗಿಯಲ್ಲಿ ಕಂಡುಬರುತ್ತದೆ.

ಈ ದೇವಿಗೆ ನಾಲ್ಕು ಕೈಗಳಿದ್ದು ಬಲಗೈಯಲ್ಲಿ ತ್ರಿಶೂಲ, ಕತ್ತಿಯನ್ನು ಎಡಗೈಯಲ್ಲಿ ಡಮರು ಮತ್ತು ಪಾನ್ ಬಟ್ಟಲನ್ನು (ಅಕ್ಷಯ ಪಾತ್ರೆ) ಹಿಡಿದಿರುತ್ತಾಳೆ. ಈ ದೇವಿಯ ಪಾದದ ಕೆಳಗೆ ಅಂದರೆ ಅಧಿಷ್ಠಾನದ ಭಾಗದಲ್ಲಿ ಸಪ್ತಮಾತೃಕೆಯ ಕಪ್ಪು ಶಿಲ್ಪಗಳಿಂದ ಪ್ರತಿಷ್ಠಾಪಿಸಲ್ಪಟ್ಟಿರುತ್ತದೆ. ಈ ದೇವಿಯ ಹಿಂಭಾಗದಲ್ಲಿ ಸಂಪೂರ್ಣವಾಗಿ ಬೆಳ್ಳಿಯಿಂದ ಮಾಡಿದ ಕೀರ್ತಿ ಮುಖವನ್ನು ಹೊಂದಿದ ಪ್ರಭಾಳಿಯನ್ನು ನಿರ್ಮಿಸಲಾಗಿದೆ. ತಾಯಿಯ ಬೆಳ್ಳಿಯ ಮೂಗುತಿಯನ್ನು ಧರಿಸಿದ್ದು ಬಂದ ಭಕ್ತಾದಿಗಳೆಲ್ಲರಿಗೂ ಶಕ್ತಿ ದೇವತೆಯಾಗಿ ಎಲ್ಲರನ್ನೂ ಕಾಪಾಡುತ್ತಿದ್ದಾಳೆ. ಈ ದೇವಿಯನ್ನು 'ತಿಗಳಾ' ಜನಾಂಗದವರು ಇಲ್ಲಿನ ಮುಖ್ಯ ಅರ್ಚಕರಾಗಿ ಪೂಜೆಯನ್ನು ನೆರವೇರಿಸುತ್ತಾರೆ.

**ಹರಕೆ / ಪವಾಡ:** ಸ್ಥಳೀಯ ಮಾಹಿತಿಯಂತೆ ಒಬ್ಬ ರಾಮನಗರದ ಕುರುಡ ಭಕ್ತ ಈ ದೇವಿಯನ್ನು ಸ್ಮರಿಸಿ ತಾಯಿ ನಾನು ನನ್ನ ಊರಿಗೆ ಹೋಗುವ ಮುನ್ನ ಅಥವಾ ಮನೆಗೆ ತಲುಪುವ ಮುನ್ನ ನನಗೆ ದೃಷ್ಟಿ ಬಂದರೆ ನನ್ನ ಮೈ ಮೇಲೆ ಧರಿಸಿರುವ ಎಲ್ಲಾ ಆಭರಣಗಳನ್ನು ಹಾಗೂ ನನ್ನ ಎಲ್ಲಾ ಸಂಪತ್ತನ್ನು ನಿನಗೆ ಅರ್ಪಿಸುತ್ತೇನೆ ಎಂದು ಮತ್ತು ನಿನ್ನ ಹರಕೆಗಾಗಿ ಚಿನ್ನವನ್ನು ಮಾಡಿಸುವುದಾಗಿ ಪ್ರಾರ್ಥಿಸಿದ ಕಾರಣ ಇದರಿಂದ ದೇವಿಯ ಅನುಗ್ರಹದ ಪರಿಣಾಮ ಈ ಭಕ್ತನಿಗೆ

ಕಣ್ಣುಗಳು ಬಂದು ಈತನು ಸಹ ದೇವಾಲಯದ ನಿರ್ಮಾಣದಲ್ಲಿ ಪ್ರಧಾನ ಪಾತ್ರ ವಹಿಸಿದನೆಂದು ತಿಳಿಯಬಹುದಾಗಿದೆ.

**ಜಾತ್ರೆ / ಉತ್ಸವ:** ಇಲ್ಲಿನ ಸ್ಥಳೀಯ ಮಾಹಿತಿಯಂತೆ ಪ್ರತಿ ವರ್ಷ ಏಪ್ರಿಲ್–ಮೇ ತಿಂಗಳಿನಲ್ಲಿ ಈ ದೇವಿಯ ಜಾತ್ರೆಯು ಸುಮಾರು ಎಂಟು ದಿನಗಳ ಕಾಲ ನಡೆಯುತ್ತಿದ್ದು ಮುಖ್ಯವಾಗಿ ಧನಗಳ ಜಾತ್ರೆ, ಕೊಂಡೋತ್ಸವ, ಸಿಡಿ ಉತ್ಸವ, ಉಯ್ಯಾಲೋತ್ಸವವನ್ನು ನೆರವೇರಿಸಲಾಗುತ್ತದೆ. ಇದರಂತೆ ಇಲ್ಲಿನ ಭಕ್ತಾದಿಗಳು ಈ ಸಮಯವನ್ನು ಜಾನಪದ ದಾಟಿಯಲ್ಲಿ ಈ ರೀತಿ ಉತ್ಸವವನ್ನು ಹೊಗಳಿದ್ದಾರೆ.

**"ತೈಲೂರು ಕೊಂಡ ಚೆಂದ**
**ಹೆಮ್ಮನಳ್ಳಿ ಬಂಡಿ ಚೆಂದ**
**ಮದ್ದೂರಿನ ಸಿಡಿ ಚೆಂದವೋ ಚಂದ"**

ಎಂದು ಸ್ಮರಿಸುತ್ತಾ ದೇವಿಯನ್ನು ಆರಾಧಿಸುತ್ತಾರೆ.

**ಛಾಯಾಚಿತ್ರಗಳು:**


1.ಶ್ರೀ ಆದಿಶಕ್ತಿ ಡಿಂಕದಮ್ಮ ದೇವಿ


2. ಶ್ರೀ ಚಂದಗೋಳಮ್ಮ ದೇವಿ


3. ಶ್ರೀ ಅಹಲ್ಯದೇವಿ


4. ಶ್ರೀ ಬೆಟ್ಟದ ಅರಸಮ್ಮ ದೇವಿ


5. ಶ್ರೀ ಮದ್ದೂರಮ್ಮ ದೇವಿ

## ಪರಾಮರ್ಶನ ಗ್ರಂಥಗಳು:


1. Hayavadana Rao C, Mysore Gazetter –02.
2. Pro.Shalvapille Iyanger, (2019), Iconography of Vishnu in Hoysala Temples, Manasa Gangothri, Mysore.
3. Dr.Swamy LN, (1996), History of SriRangapatna, Harman Publishing House, Mysore.
4. Heraas Herry, (1927), The Aravidu Dynasty of Vijayanagara, Madras.
5. Krishnaswamy Iyengar KS, (1960), Mysore Under The Wodeyar's, Madras.
6. Huks T, (1932), Life of Sir David Beard, volume–02, London.
7. Achutha Rao DS, (1956), Early Wodeyars of Mysore and They are Cultural Tradition in quarterly Journals. Methic society, Bangalore.
8. Raviprasad S, (2017), Srirangapatnada Ithihasika mattu Samskrithika Ithiha–sa–Ondhu Adyana, Mysore.
9. Diwakar R, (2006), Karnataka Samskruthika Parampare, Kannada Mattu Sanskrithi Ilake, Bangalore.
10. Gopinath Rao TN, (1914), A Elements of Hindu Iconography, volume 1 and 2, The law printing house, Madras.
11. Dr.Gopal R, (2008), Mandya Jilleya Ithihasa Mattu Purathatva, Directorate of Archaeology and Museum, Mysore palace complex, Mysore.
12. Rama Ramakrishna KR & Gayatri Devi JV, (2016), Heritage series of Sri–rangapatna, Department of Archaeology Museum and Heritage, Bangalore.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.